ಪಂಚಮ

ಸಂಪುಟ 11
ಸಂಚಿಕೆ 3-4
ಫೆಬ್ರುವರಿ – 87
ಬೆಲೆ – 1 ರೂ.

ದ.ಸಂ.ಸ. ರಾಜ್ಯ ಸಂಚಾಲಕರಾಗಿ

ಬಿ. ವಿ. ಚಂದ್ರಪ್ರಸಾದ್ ತ್ಯಾಗಿ

ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕರಾಗಿ ಹಾಸನದ ಬಿ.ವಿ. ಚಂದ್ರಪ್ರಸಾದ್ ತ್ಯಾಗಿ ಅವರು ಚುನಾಯಿತರಾಗಿದ್ದಾರೆ. ಹಾಸನ ಜಿಲ್ಲೆ ಅರಸೀಕೆರೆಯ ಆನೆಬೆಟ್ಟದಲ್ಲಿ ನಡೆದ ಆಯ್ಕೆ ಸಮಿತಿ ಸಭೆಯಲ್ಲಿ ಇನ್ನೂ ಮೂವರು ಪದಾಧಿಕಾರಿಗಳನ್ನು ಚುನಾಯಿಸಲಾಯಿತು.

ಎಂ. ಡಿ. ಗಂಗಯ್ಯ – ರಾಜ್ಯ ಸಂಘಟನಾ ಸಂಚಾಲಕ — 1
ಎನ್. ವೆಂಕಟೇಶ್ – ರಾಜ್ಯ ಸಂಘಟನಾ ಸಂಚಾಲಕ — 2
ಹಾಗೂ ಪಿ. ಶಂಬಯ್ಯ, ರಾಜ್ಯ ಖಜಾಂಚಿಯಾಗಿ ಚುನಾಯಿತರಾಗಿದ್ದಾರೆ.

ದಲಿತ ಸಂಘರ್ಷ ಸಮಿತಿಯ ಇತಿಹಾಸದಲ್ಲಿ ಎರಡನೇ ಬಾರಿಗೆ ನಡೆದ ಚುನಾವಣೆಯಲ್ಲಿ ರಾಜ್ಯದ ವಿವಿಧ ತಾಲ್ಲೂಕು ಕೇಂದ್ರಗಳಿಂದ ಬಂದ ಪದಾಧಿಕಾರಿಗಳು ಮತದಾರರಾಗಿದ್ದರು.

ರಾಜ್ಯ ಸಂಚಾಲಕ ಸ್ಥಾನಕ್ಕೆ ಸ್ಪರ್ಧಿಸಿದ್ದ ಬಿ.ವಿ. ಚಂದ್ರಪ್ರಸಾದ್ ತ್ಯಾಗಿ(ಹಾಸನ) 140 ಮತಗಳನ್ನೂ, ಹುಲ್ಲುಕೆರೆ ಮಹಾದೇವ (ಮಂಡ್ಯ) 29 ಮತಗಳನ್ನೂ ಗಳಿಸಿದರು. ಸಂಘಟನಾ ಸಂಚಾಲಕ–1 ಸ್ಥಾನಕ್ಕೆ ಎಂ.ಡಿ. ಗಂಗಯ್ಯ, (ಚಿಕ್ಕಮಗಳೂರು) ಅವರು ಅವಿರೋಧವಾಗಿ ಆಯ್ಕೆಯಾದರು.

ಸಂಘಟನಾ ಸಂಚಾಲಕ–2 ಸ್ಥಾನಕ್ಕೆ ಸ್ಪರ್ಧಿಸಿದ್ದ ಎನ್. ವೆಂಕಟೇಶ್ (ಚಿಂತಾಮಣಿ) 140 ಮತಗಳನ್ನೂ, ನಾರಾಯಣ ದಾಸ್

(8ನೇ ಪುಟಕ್ಕೆ)

ಡಿ.ಎಸ್.ಎಫ್. ನಿಂದ ಪ್ರತಿಭಟನೆ

ಜನತಾ ಸರ್ಕಾರ ಕ್ಯಾರಿ ಓವರ್ ಪದ್ಧತಿಗೊಳಪಟ್ಟ ದಲಿತ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯವನ್ನು ರದ್ದುಗೊಳಿಸಿದ್ದನ್ನು ಪ್ರತಿಭಟಿಸಿ ತುಮಕೂರಲ್ಲಿ ದಲಿತ ವಿದ್ಯಾರ್ಥಿ ಒಕ್ಕೂಟದಿಂದ ಪ್ರತಿಭಟನೆ ನಡೆಯಿತು.



ಸಣ್ಣ ಉಳಿತಾಯ ಖಾತೆಯಿಂದ ಲಕ್ಷಾಧೀಶರಾಗುವ ಅವಕಾಶ

ಅಂಚೆ ಕಛೇರಿಯಲ್ಲಿ ತೆರೆದ ಉಳಿತಾಯ ಖಾತೆಗಳಲ್ಲಿ ಕನಿಷ್ಠ ರೂ. 200ನ್ನು ಠೇವಣಿ ಇಟ್ಟುಕೊಂಡಿದ್ದಲ್ಲಿ ಸಾಲಿಯಾನ ಶೇಕಡಾ 5.5 ಬಡ್ಡಿ ದೊರೆಯುವುದಲ್ಲದೆ 30 ಲಕ್ಷ ರೂಪಾಯಿಗಳಿಗೂ ಮೀರಿದ 22,000ಕ್ಕೂ ಹೆಚ್ಚಿನ ಸಂಖ್ಯೆಗಳ ಬಹುಮಾನಗಳು ಪ್ರತಿ ಆರು ತಿಂಗಳಿಗೊಮ್ಮೆ ಲಭ್ಯವಾಗುವುದು. ಬಹುಮಾನಗಳು ಹೀಗಿವೆ :

* ಮೊದಲನೇ ಬಹುಮಾನ : ಒಂದು ಲಕ್ಷ ರೂಪಾಯಿಗಳು.
* ಎರಡನೇ ಬಹುಮಾನ : ರೂ. 50,000– ಐದು ಖಾತೆಗಳಿಗೆ
* ಮೂರನೇ ಬಹುಮಾನ : ರೂ. 20,000– ಹತ್ತು ಖಾತೆಗಳಿಗೆ
* ನಾಲ್ಕನೇ ಬಹುಮಾನ : ರೂ. 5,000– ಒಂದು ನೂರು ಖಾತೆಗಳಿಗೆ
* ಐದನೇ ಬಹುಮಾನ : ರೂ. 500– ಎರಡು ಸಾವಿರ ಖಾತೆಗಳಿಗೆ
* ಆರನೇ ಬಹುಮಾನ : ರೂ. 50– ಇಪ್ಪತ್ತು ಸಾವಿರ ಖಾತೆಗಳಿಗೆ

ಇಂಥ ಖಾತೆಗಳಲ್ಲಿ ವೈಯಕ್ತಿಕವಾಗಿ ರೂ. 25,000 ವರೆಗೆ ಹಾಗೂ ಜಂಟಿಯಾಗಿ ರೂ. 50,000 ವರೆಗೆ ಹಣ ತೊಡಗಿಸಬಹುದು. ಕನಿಷ್ಠ ರೂ. 200 ಠೇವಣಿಯು ಏಪ್ರಿಲ್‌ನಿಂದ ಸೆಪ್ಟಂಬರ್‌ವರೆಗೆ ಹಾಗೂ ಅಕ್ಟೋಬರ್‌ನಿಂದ ಮಾರ್ಚಿ ಅಂತ್ಯದವರೆಗೆ ಇದ್ದ ಖಾತೆಗಳು ಆರು ತಿಂಗಳಿಗೊಮ್ಮೆ ಡ್ರಾನಲ್ಲಿ ಭಾಗವಹಿಸುವುವು. ಒಂದು ಅಂಚೆ ಕಛೇರಿಯಲ್ಲಿ ಒಂದರಂತೆ ನಿಮಗಿಷ್ಟ ಬಂದಷ್ಟು ಖಾತೆಗಳನ್ನು ಬೇರೆ ಬೇರೆ ಕಡೆಗೆ ತೆರೆದು ಬಹುಮಾನದ ಅವಕಾಶ ಹೆಚ್ಚಿಸಿಕೊಳ್ಳಬಹುದು. ದೊಡ್ಡ ಬಹುಮಾನ ಬಂದರೆ ತಂತಿ ಸಂದೇಶ ನೀಡಲಾಗುವುದು. ಇತರೆ ಬಹುಮಾನ ಬಂದರೆ ತಮ್ಮ ಖಾತೆಗೆ ಜಮಾ ಮಾಡಲಾಗುವುದು. ಚೆಕ್ ವ್ಯವಹಾರ, ನಾಮ ನಿರ್ದೇಶನ, ವರ್ಗಾವಣೆ ಮುಂತಾದ ಎಲ್ಲಾ ಸೌಲಭ್ಯಗಳೂ ಇವೆ. ಹಣವನ್ನು ಬೇಕಾದಾಗ ಪಡೆಯಬಹುದು. ಕಾರಣ ಅನುಕೂಲವಾದಾಗಲೆಲ್ಲ ಹಣ ಸಂಗ್ರಹಿಸಿಡಿರಿ. ಈ ಹಣದ 2/3 ನೇ ಭಾಗ ರಾಜ್ಯದ ಹಾಗೂ 1/3ನೇ ಭಾಗ ರಾಷ್ಟ್ರದ ಅಭಿವೃದ್ಧಿ ಯೋಜನೆಗಳಿಗೆ ದೊರೆಯುವುದರಿಂದ ಜನ ಸೇವೆಯ ಭಾಗ್ಯವೂ ತಮ್ಮದಾಗುವುದು.

ನಮ್ಮ ರಾಜ್ಯದಲ್ಲಿ ಇಂತಹ ಉಳಿತಾಯ ಖಾತೆಗಳನ್ನು ಪಡೆಯುವ ಆಂದೋಲನ ಕೈಗೊಂಡಿದೆ. ತಾವು ಹತ್ತಿರದ ಅಂಚೆ ಕಛೇರಿಯನ್ನು ಸಂದರ್ಶಿಸಿ ಖಾತೆಗಳನ್ನು ತೆರೆಯಬಹುದು ಅಥವಾ ಸಣ್ಣ ಉಳಿತಾಯದ ಅಧಿಕಾರಿಗಳು, ಕಾರ್ಯಕರ್ತರು ತಮ್ಮನ್ನು ಸಂಪರ್ಕಿಸಿದಾಗ, ತಮ್ಮ ಹಾಗೂ ತಮ್ಮ ಕುಟುಂಬದವರ ಹಸರಿನಲ್ಲಿ ಖಾತೆ ತೆರೆದು, ಸೌಭಾಗ್ಯವಂತರಾಗಲು ಮರೆಯಬೇಡಿರಿ.

'ಸಣ್ಣ ಸಣ್ಣ ಉಳಿತಾಯ ಕಣ್ಣು ಕೋರೈಸುವ ಆದಾಯ'

'ಸಣ್ಣ ಉಳಿತಾಯ ಖಾತೆಯಿಂದ ಬಹುಮಾನ ಬಂದರೂ ಲಾಭ;

ಬರದಿದ್ದರೂ 11 ರೂಪಾಯಿ ಲಾಭ ಗಟ್ಟಿ.'

ಇದರಿಂದ ತಮಗೂ ಲಾಭ, ದೇಶಕ್ಕೂ ಲಾಭ. ಈ ವಿಶೇಷ ಆಂದೋಲನಕ್ಕೆ ಸಹಕಾರ ನೀಡಿ.

* * *

● ಕರ್ನಾಟಕ ವಾರ್ತೆ

"ನೈಸರ್ಗಿಕ ಸಂಪತ್ತು ಯಾರ ಸೊತ್ತೂ ಅಲ್ಲ"

ಜನವರಿ 15 ರಿಂದ 18ರವರೆಗೆ, ಚಿಕ್ಕಮಗಳೂರು ಜಿಲ್ಲೆ ಅಜ್ಜಂಪುರದಲ್ಲಿ ದಲಿತ ವಿದ್ಯಾರ್ಥಿ ಒಕ್ಕೂಟವು ದಲಿತ ವಿದ್ಯಾರ್ಥಿಗಳಿಗಾಗಿ ಅಧ್ಯಯನ ಶಿಬಿರವನ್ನೇರ್ಪಡಿಸಿತ್ತು. ಶಿಬಿರಾರ್ಥಿಗಳು ಪ್ರತಿದಿನ ಸಂಜೆ ಪಕ್ಕದ ಹಳ್ಳಿಗಳಿಗೆ ಭೇಟಿ ನೀಡಿ ಸಾಂಸ್ಕೃತಿಕ ಕಾರ್ಯಕ್ರಮದ ಮೂಲಕ ಬಡತನದ ಬೇಗೆಯಲ್ಲಿ ಬೇಯುವ ಜೀವಗಳ ಜೊತೆ ತಮ್ಮ ವಿಚಾರಗಳನ್ನು ಹಂಚಿಕೊಂಡರು.

● ಕಲ್ಲಯ್ಯ, ಚಿಕ್ಕಮಗಳೂರು

ಈ ಶಿಬಿರದಲ್ಲಿ ಪಾಲ್ಗೊಂಡಿದ್ದ ಶಿಬಿರಾರ್ಥಿಗಳ ಆಸೆಯ ಚಿಗುರುಗಳಿಗೆ ವಿವಿಧ-ಉಪನ್ಯಾಸಕರು ವಿವಿಧ ತತ್ವ ಆದರ್ಶಗಳ ನೀರು. ಗೊಬ್ಬರವನ್ನೆರೆದರು. ದಲಿತ ವಿದ್ಯಾರ್ಥಿ ಒಕ್ಕೂಟದ ಜಿಲ್ಲಾ ಸಂಚಾಲಕ ಬಿ.ಡಿ. ಮಂಜುನಾಥ್ ಶಿಬಿರವನ್ನು ಉದ್ಘಾಟಿಸಿದರು. ಉಪನ್ಯಾಸಕರಲ್ಲೊಬ್ಬರಾದ ಹೆಚ್. ಎಂ. ರುದ್ರಸ್ವಾಮಿಯವರು ದಲಿತರ ಕಣ್ಮಣಿ ಅಂಬೇಡ್ಕರ್‌ರವರ ಜೀವನ ಸಾಧನೆಯನ್ನು ಮೂರು ಘಟಕಗಳಾಗಿ ವಿಂಗಡಿಸಿ "ಆ ಮಹಾನ್ ನಾಯಕರ ಬಾಲ್ಯ ಹಾಗೂ ವಿದ್ಯಾರ್ಥಿ ಜೀವನದ ಕಡು ಕಷ್ಟಗಳು ಇಂದಿನ ದಲಿತ ವಿದ್ಯಾರ್ಥಿಗಳಿಗೆ ಆದರ್ಶವಾಗುತ್ತವೆ. ಹಿಂದೂ ಧರ್ಮದ ಅವಮಾನವೀಯ ವರ್ತನೆಯನ್ನು ಸಹಿಸಲಾರದ ಆ ದಿವ್ಯ ಚೇತನವು ಮನುಸ್ಮೃತಿಯನ್ನು ಸುಡುವುದರ ಮೂಲಕ ಚೌದರ್ ಕೆರೆಯ ನೀರನ್ನು ಕುಡಿಯಲು ಸಹಸ್ರಾರು ಸಂಖ್ಯೆಯಲ್ಲಿ ದಲಿತರನ್ನು ಸಂಘಟಿಸಿ ಹೂಡಿದ ಹೋರಾಟ ದ. ಸಂ. ಸ. ಹೋರಾಟಕ್ಕೆ ನಾಂದಿಯಾಗಬಹುದೆಂದು ನುಡಿದರು.

ಮಾನವತಾವಾದಿ ಅಂಬೇಡ್ಕರ್‌ರವರು ಪ್ರಪಂಚದ ಸರ್ವ ಧರ್ಮಗಳನ್ನು ಅಧ್ಯಯನ ಮಾಡುತ್ತಾ ಒಳಿತು-ಕೆಡಕುಗಳನ್ನು ಮನಗಂಡು ಅಂತೆಯೇ ಬೌದ್ಧ ಧರ್ಮದ ಸಿದ್ಧಾಂತದ ತಿರುಳನ್ನು ಜೀರ್ಣಿಸಿಕೊಂಡು. ತಮ್ಮವರ ಬಾಳಿನ ದಾರಿಗೆ ಈ ಧರ್ಮ ಬೆಳಕಾಗಬಹುದೆಂದು ಬಗೆದು ತಮ್ಮ ಲಕ್ಷಾಂತರ ದಲಿತ ಬಂಧುಗಳೊಂದಿಗೆ ಬೌದ್ಧ ಧರ್ಮವನ್ನು ಸ್ವೀಕರಿಸಿದರು" ಎಂದು ಹೇಳಿದರು.

ಅಜ್ಜಂಪುರದ ಬಿ. ಚಂದ್ರೇಗೌಡ ಅವರು ದೇವರು ಧರ್ಮಗಳ ಬಗ್ಗೆ ಉಪನ್ಯಾಸ ನೀಡುತ್ತ "ಮತ ಮೌಢ್ಯಕ್ಕೆ ಬಲಿಯಾದ ಮಾನವ ಕುಲವೇ ಛಿದ್ರ-ಛಿದ್ರಗೊಂಡಿದೆ. ಬದುಕು ಕುಲುಷಿತಗೊಂಡಿದೆ. ದೇವರು ಧರ್ಮವೆಂಬ ಭಯವನ್ನು ಅಂದು ಜನರ ಮೆದುಳಿಗೆ ಅಂಟಿಸಿ ಅವರನ್ನು ಗುಲಾಮರನ್ನಾಗಿಸಿ ಕೂತುಣ್ಣುವ ಜನರು ಅಪಾರವಾದ ಮೋಸ, ವಂಚನೆಯನ್ನು ಮಾಡುತ್ತಿದ್ದಾರೆ. ಇದು ಇಲ್ಲವಾಗಬೇಕಾದರೆ ದೇವರು ಧರ್ಮಗಳನ್ನು ವೈಜ್ಞಾನಿಕ ವಿಮರ್ಶೆ ಹಾಗೂ ಸಂಶೋಧನೆಗೊಳಪಡಿಸಿ ಸ್ವಾತಂತ್ರ್ಯವಾದ ಆಲೋಚನೆ ಕೈಗೊಳ್ಳಬೇಕು" ಎಂದು ವಿವರಿಸಿದರು.

ದ.ಸಂ.ಸ. ಜಿಲ್ಲಾ ಸಂಚಾಲಕ ಎಂ.ಡಿ. ಗಂಗಯ್ಯ ಅವರು ಭೂಸಮಸ್ಯೆ ಕುರಿತು ಮಾತಾಡುತ್ತ "ನೈಸರ್ಗಿಕ ಸಂಪತ್ತು ಯಾರ ಸೊತ್ತಲ್ಲ ಯಾರೂ ಅದಕ್ಕೆ ವಾರಸುದಾರರಲ್ಲ.

ಹಿಂದಿನಿಂದಲೂ ಭೂಮಿಯ ಹಕ್ಕು ಕಳೆದುಕೊಂಡು ದುಡಿಯುವುದೊಂದೆ ಅದಾಗಿರಲು ಕಾರಣ ದಲಿತರ ಅಜ್ಞಾನ, ಬಡತನ, ಅಂಧಾನುಕರಣೆಗಳು ಜಾತಿಗೂ ಭೂಮಿಗೂ ನಿಕಟ ಸಂಬಂಧವಿದ್ದು ಜಾತಿವಾದಿಗಳೇ ಭೂಒಡೆಯರಾಗಿದ್ದಾರೆ"ಂದು ತಿಳಿಸುತ್ತಾ ದಲಿತರಿಗೆ ನ್ಯಾಯ ಸಿಕ್ಕಿ ಎಲ್ಲದರಲ್ಲೂ ಸಮಾನತೆ ಬೇಕೆಂಬುದಾದರೆ ಆಸ್ತಿಯ ಹಕ್ಕು ರದ್ದಾಗಬೇಕು. ಸಂಪತ್ತಿನ ಒಡೆತನ ಸರ್ಕಾರದ ಕೈ ಸೇರಬೇಕೆಂದು ಹೇಳಿದರು.

ಸಿದ್ದಗಂಗಯ್ಯ ಅವರು ದಲಿತರ ಸಾಮಾಜಿಕ ಸಂಕಷ್ಟಗಳ ಕುರಿತು ಮಾತಾಡುತ್ತ, ದಲಿತರು, ಶಿಕ್ಷಣ, ಉದ್ಯೋಗ ಹಾಗೂ ರಾಜಕೀಯ ಮುಂತಾದ ಕ್ಷೇತ್ರಗಳಲ್ಲೆಲ್ಲ ಅನೇಕ ಅವಮಾನಕರದ ಸಂಕಟಗಳನ್ನು ಅನುಭವಿಸುತ್ತಿದ್ದಾರೆ ಎಂಬುದನ್ನು ನಿದರ್ಶನಗಳ ಮೂಲಕ ವಿವರಿಸಿದರು. ಈ ಭ್ರಷ್ಟ ವ್ಯವಸ್ಥೆ ಇರುವುದರಿಂದಲೇ ಅನಿಷ್ಟಗಳು ಸಂಭವಿಸುತ್ತವೆ. ಇದು ತೊಲಗಬೇಕಾದರೆ ಅನಿವಾರ್ಯತೆಯನ್ನು ಅಗತ್ಯವಾಗಿ ಸೃಷ್ಟಿಸಬೇಕೆಂದರು.

ದ. ಆಫ್ರಿಕಾದ ಕಪ್ಪು ಜನರ ಹೋರಾಟ ಕುರಿತು ಉಪನ್ಯಾಸ ನೀಡಿದ ಖ್ಯಾತ ಬಂಡಾಯ ಸಾಹಿತಿ ರಮಜಾನ್ ದರ್ಗ ಅವರು ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರ ದಬ್ಬಾಳಿಕೆಯ ವಿರುದ್ಧ ಕಪ್ಪು ಜನರು 75 ವರ್ಷಗಳಿಂದಲೂ ನಡೆಸುತ್ತಿರುವ ಹೋರಾಟದ ಚಿತ್ರಣವನ್ನು ಶಿಬಿರಾರ್ಥಿಗಳ ಕಣ್ಣ ಮುಂದಿಟ್ಟರು. ಅದು ದ.ಸಂ.ಸ. ಹೋರಾಟಕ್ಕೆ ಮಾರ್ಗದರ್ಶನವಾಗುತ್ತದೆ ಎಂದರು. ಭಾರತದಲ್ಲಿ ಹಾಗೂ ಆಫ್ರಿಕಾದಲ್ಲಿ ವರ್ಣಭೇದ ನೀತಿಗಳು ಅತಿ ಘೋರವೆಂದು ಭಾರತದಲ್ಲಿ ಸಾಂಸ್ಕೃತಿಕವಾಗಿ ಅಸ್ಪೃಶ್ಯತಾ ಆಚರಣೆ ನಡೆಸಿದರೆ, ಆಫ್ರಿಕಾದಲ್ಲಿ ರಾಜ್ಯಾಂಗ ಬದ್ಧವಾಗಿ, ಶಾಸನಬದ್ಧವಾಗಿ ಜಾರಿಗೊಳಿಸಿದ್ದಾರೆಂದು ಕೀಡು ಕಠೋರತೆಯನ್ನು ವಿವರಿಸಿದರು. ಭಾರತದಲ್ಲಿ ಅಸ್ಪೃಶ್ಯರು ಅಲ್ಪ ಸಂಖ್ಯೆಯಲ್ಲಿ ಸಣ್ಣ ಸಣ್ಣ ಕೊಳೇಗೇರಿಯಲ್ಲಿ ವಾಸವಾಗಿದ್ದಾರೆ. ಆಫ್ರಿಕದಲ್ಲಿ ಅಪಾರ ಸಂಖ್ಯೆಯ ಕಪ್ಪು ಜನರು, ದೊಡ್ಡ ದೊಡ್ಡ ಕೊಳೇಗೇರಿಯಲ್ಲಿ ವಾಸವಾಗಿದ್ದಾರೆಂದರು. ದ. ಆಫ್ರಿಕವು ಅತಿ ಬಡವರನ್ನೊಳಗೊಂಡ ಅತ್ಯಂತ ಶ್ರೀಮಂತ ದೇಶ. ಕೇವಲ ಹಿಡಿಯಷ್ಟಿರುವ ಬಿಳಿಯರು ಎಲ್ಲ ಬಗೆಯ ಕ್ರೌರ್ಯವನ್ನು ಎಸಗುತ್ತಿರುವುದರ ವಿರುದ್ಧ ನಡೆಯುತ್ತಿರುವ ಕಪ್ಪು ಜನರ ಹೋರಾಟವನ್ನು ಅಲ್ಲಿನ ಸ್ಥಿತಿಗಳನ್ನು ಎಳೆಎಳೆಯಾಗಿ ವಿವರಿಸಿದರು. ಬಿಳಿಯರ ವಿರುದ್ಧ ಸಿಡಿದೆದ್ದ ನೆಲ್ಸನ್ ಮಾಂಡೆಲರ ಜೈಲುವಾಸವನ್ನು ವಿವರಿಸುತ್ತ ಇತ್ತೀಚೆಗೆ ಬಿಳಿಯರ ಅಕೃತ್ಯದಲ್ಲಿ ನೇಣುಗಂಬವೇರಿ. ಸ್ವಾತಂತ್ರ್ಯಕ್ಕಾಗಿ ತನ್ನ ಜೀವವನ್ನೇ ಅರ್ಪಿಸಿದ 22 ವರ್ಷದ ಬೆಂಜಾಮಿನ್ ಮೋಲಾಯಿಸ್‌ರ ಬಗ್ಗೆಯೂ ತಿಳಿಸಿದರು.

ಕಾನೂನು ವ್ಯವಸ್ಥೆ ಬಗ್ಗೆ ಮಾತಾಡಿದ ವಕೀಲ ದೃವನಾರಾಯಣ ಅವರು ಯಾವುದೇ ಸಮಾಜದ ಬದಲಾವಣೆ ಕಾನೂನಿನಿಂದ ಸಾಧ್ಯವಿಲ್ಲ. ಸಂಘಟಿತ ಹೋರಾಟದ ಪರಿಣಾಮವಾಗಿ ಹೊಸ ವ್ಯವಸ್ಥೆಯೊಂದಿಗೆ ಕಾನೂನು ಸೃಷ್ಟಿಯಾಗುತ್ತದೆಂದು ಅಭಿಪ್ರಾಯ ತೋರುತ್ತಾ ಉಪನ್ಯಾಸ ನೀಡಿದರು.

ಶಿಬಿರಾರ್ಥಿಗಳ ಅಭಿಪ್ರಾಯ ಕ್ರೋಢೀಕರಿಸಿ ಶಿಬಿರದಲ್ಲಿದ್ದಂತೆ ತಮ್ಮ ಹೋರಾಟದ ಜೀವನದಲ್ಲೂ ಶಿಸ್ತನ್ನು ರೂಪಿಸಿಕೊಳ್ಳಬೇಕೆಂದು ದ.ಸಂ.ಸ. ಜಿಲ್ಲಾ ಸಂಘಟನಾಸಂಚಾಲಕ ರಾಧಾಕೃಷ್ಣ ತಿಳಿಸಿ,ವಂದಿಸಿ, ಶಿಬಿರ ಮುಕ್ತಾಯಗೊಳಿಸಿದರು. ●

ಎರಡು ಉಪನ್ಯಾಸಗಳು

ಭಾರತದ ಬೌದ್ಧಿಕ ದಾರಿದ್ರ್ಯ

ಮೂಲ : ವಿ.ಆರ್. ನಾರ್ಲ

ಅನುವಾದ: ಗಂಗಾಧರಮೂರ್ತಿ

5

ಪ್ರಾಚೀನ ಮತ್ತು ಮಧ್ಯಕಾಲ

ಬೌದ್ಧಿಕ ದೃಷ್ಟಿಕೋನದಿಂದ ಆಗಿರುವ ಮತ್ತೊಂದು ಅಪರಾಧವೆಂದರೆ ಪುರಾಣಗಳೆಂದು ಕರೆಯುವ ರಾಶಿರಾಶಿ ಕಟ್ಟುಕಥೆಗಳ ರಚನೆ. ನಾಸ್ತಿಕರನ್ನು, ಅದರಲ್ಲೂ ಬೌದ್ಧ ಮತೀಯರನ್ನು ಸದೆಬಡಿಯುವ ಉದ್ದೇಶವು ಇವುಗಳಲ್ಲೂ ಅಡಗಿದೆ. ವೇದದಲ್ಲಾಗಲೀ ಉಪನಿಷತ್ತಿನಲ್ಲಾಗಲೀ ಮೂರ್ತೀಕೃತ ದೈವದ ಪರಿಕಲ್ಪನೆ ಕಂಡುಬರುವುದಿಲ್ಲ. ಬುದ್ಧನ ಬೋಧನೆಗಳಲ್ಲಿ ದೇವರಿಗೆ ಸ್ಥಾನವಿಲ್ಲದಿದ್ದರೂ ಮಹಾಯಾನ ಶಾಖೆ ಬುದ್ಧನನ್ನು ದೈವತ್ವಕ್ಕೇರಿಸಿದ್ದಲ್ಲದೆ ಅವನನ್ನು ಮೂರ್ತೀಭವಿಸಿತು. ಈ ಪ್ರಕ್ರಿಯೆ ವೇದಗಳಲ್ಲಿ ಕಂಡುಬರುವ ಸೋಮಪಾನಾಸಕ್ತ ದೇವರುಗಳಿಂದಲೂ, ನಿರಾಕಾರವೂ, ಅನಿರ್ವಚನೀಯವೂ, ಅನಾಮಿಕವೂ ಆದ ಉಪನಿಷತ್ತುಗಳ ದೈವ ಕಲ್ಪನೆಗಳಿಂದಲೂ ಬೇರೆಯೇ ಆಗಿತ್ತು. ಆದ್ದರಿಂದ ಬೌದ್ಧಮತದ ಮಹಾಯಾನ ಶಾಖೆಯು ಲಕ್ಷಾಂತರ ಸಾಮಾನ್ಯರನ್ನು ಆಕರ್ಷಿಸತೊಡಗಿತು. ದಿನದಿಂದ ದಿನಕ್ಕೆ ಬಲಗೊಳ್ಳುತ್ತಿದ್ದ ಈ ಒಲವನ್ನು ನಿವಾರಿಸಲು ಹತಾಶರಾಗಿ ಹೆಣಗಾಡುತ್ತಿದ್ದ ವೈದಿಕ ಪುರೋಹಿತರು, ಉಪನಿಷತ್ ವಿದ್ವಾಂಸರು 'ಅವತಾರ' ಸಿದ್ಧಾಂತವನ್ನು ರೂಪಿಸಿದರು. ದುಷ್ಟಶಕ್ತಿಗಳು ಬಲಿತು ಶಿಷ್ಟಜನರು ಬದುಕಲು ಸಾಧ್ಯವೇ ಇಲ್ಲದಂತಹ ಕಾಲದಲ್ಲಿ ಭಗವಂತನು ಭೂಮಿಗೆ ಇಳಿದು ಶಿಷ್ಟರನ್ನು ರಕ್ಷಿಸುತ್ತಾನೆ ಎಂದು ಬೋಧಿಸತೊಡಗಿದರು. ಹೀಗೆ ಮೂರ್ತಿ ಪೂಜೆಯ ಭಕ್ತಿಯೂ ಅವತಾರ ಸಿದ್ಧಾಂತವೂ ಅವಳಿ-ಜವಳಿಯಾಗಿ ಬೆಳೆದುಬಂದವು.

ಎರಡು ಮಹಾಕಾವ್ಯಗಳೂ (ಮಹಾಭಾರತ—ರಾಮಾಯಣ), ಪ್ರಮುಖವೂ ಪ್ರಮುಖವಲ್ಲದವೂ ಆದ ಮೂವತ್ತಾರು ಪುರಾಣಗಳೂ ಶೂದ್ರರಿಗಾಗಿ ರಚಿತವಾದವು. ಅಂದರೆ ವೈದಿಕ ಸಾಹಿತ್ಯ ಜ್ಞಾನದಿಂದ ಹೊರಗೆ ನಿಲ್ಲಿಸಲ್ಪಟ್ಟ ಬಹುಸಂಖ್ಯೆ ಜನತೆಯ ಮೇಲೆ ಪ್ರಭಾವಯುತವಾಗಿ ಬಳಸಲು ಹುಟ್ಟಿಕೊಂಡಂತಹವು ಇವು. ವೇದಗಳಬಳಿ ಸುಳಿಯುವುದೇ ಶೂದ್ರನ ಪಾಲಿಗೆ ಅಕ್ಷಮ್ಯ ಅಪರಾಧವಾಗಿತ್ತು. ಪ್ರಾಚೀನ ಧರ್ಮಶಾಸ್ತ್ರಕಾರರಲ್ಲೊಬ್ಬನಾದ ಗೌತಮನ ಪ್ರಕಾರ ವೇದ ಪಾಠ ಕೇಳಿದ ಶೂದ್ರನ ಕಿವಿಯಲ್ಲಿ ಕಾದ ಸೀಸವನ್ನು ಹಾಕಬೇಕು; ವೇದೋಚ್ಚಾರಣೆ ಮಾಡಿದರೆ ನಾಲಿಗೆ ಕತ್ತರಿಸಬೇಕು; ಪಠಿಸಿದ್ದನ್ನು ಜ್ಞಾಪಿಸಿಕೊಂಡರೆ ದೇಹವನ್ನು ಎಳೆಯಾಗಿ ಸೀಳಬೇಕು. ಇದಕ್ಕಿಂತ ಘೋರವಾದ ಯಾವುದೇ ದೃಶ್ಯವನ್ನು ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ನಾನು ಹೇಳಬೇಕಾದ ಅಂಶ ಇದು; ಪಾರ್ಸಿಗಳೆಲ್ಲರಿಗೂ ಇರುವುದು ಒಂದೇ ಪವಿತ್ರ ಗ್ರಂಥ ಜೆಂಡ್– ಅವೆಸ್ತಾ; ಬೌದ್ಧರಿಗೆ ಇರುವುದು ಒಂದೇ – ಧಮ್ಮಪಾದ; ಜ್ಯೂಗಳಿಗಿರುವುದು ಒಂದೇ ತಾಲ್‌ಮುದ್; ಕ್ರಿಶ್ಚಿಯನ್ನರಿಗಿರುವುದೆಲ್ಲಾ ಒಂದೇ ಬೈಬಲ್; ಮುಸ್ಲಿಂರಿಗಿರುವುದೆಲ್ಲಾ ಒಂದೇ ಕೊರಾನ್;

ಎರಡು ಮಹಾಕಾವ್ಯಗಳೂ (ಮಹಾಭಾರತ - ರಾಮಾಯಣ) ಮುವ್ವತ್ತಾರು ಪುರಾಣಗಳೂ ಶೂದ್ರರಿಗಾಗಿ ರಚಿತವಾದವು.

ವೇದ ಕೇಳಿದ ಶೂದ್ರನ ಕಿವಿಯಲ್ಲಿ ಕಾದ ಸೀಸವನ್ನು ಹಾಕಬೇಕು, ವೇದ ಪಠಿಸಿದರೆ ನಾಲಿಗೆ ಕತ್ತರಿಸಬೇಕು. ಪಠಿಸಿದ್ದನ್ನು ನೆನಪಿಸಿಕೊಂಡರೆ ದೇಹವನ್ನು ಎಳೆಯಾಗಿ ಸೀಳಬೇಕು.

ಯಾವುದೇ ಧರ್ಮದಲ್ಲಿ ಹಲವಾರು ಗ್ರಂಥಗಳಿರುವ ಸಂದರ್ಭದಲ್ಲೂ ಕೂಡ ಅಧರ್ಮದ ಅನುಯಾಯಿ ಯಾರೇ ಆಗಲಿ ಅವುಗಳನ್ನು ಓದಬಾರದೆನ್ನುವ ನಿಷೇಧ ಎಲ್ಲೂ ಕಂಡುಬರುವುದಿಲ್ಲ. ವಿಶ್ವದ ವಿವಿಧ ಧರ್ಮಗಳಲ್ಲಿ ಹಿಂದೂ ಧರ್ಮಮಾತ್ರ ಎರಡುವರ್ಗದ ಧರ್ಮ ಗ್ರಂಥಗಳನ್ನು ಇಟ್ಟುಕೊಳ್ಳುವುದು ಸೂಕ್ತವೆಂದು ಭಾವಿಸಿತು. ಮೇಲ್ಜಾತಿಯವರಿಗಾಗಿ ವೇದಗಳು ಮತ್ತು ಶೂದ್ರರನ್ನು ತಲುಪಲು ಮಹಾಕಾವ್ಯಗಳು ಮತ್ತು ಪುರಾಣಗಳು (ಮಹಾಭಾರತವನ್ನು ಪಂಚಮ ವೇದ ಎಂದು ಕರೆದಿರುವುದು ಬಹುಶಃ ಶೂದ್ರರ ಅಭಿಮಾನಕ್ಕೆ ಒಂದಿಷ್ಟು ಉತ್ತೇಜನ ನೀಡಲು ಇರಬೇಕು !)

ವೈದಿಕರು ನಿರೂಪಿಸಿದ ಎರಡು ರೀತಿಯ ಸತ್ಯಗಳಿಂದ ಇಂತಹ ದ್ವಂದ್ವವು ಆರಂಭವಾಯ್ತು. ಅವರನ್ನು ಅನುಸರಿಸಿದ ಪುರೋಹಿತರು ಎರಡು ವರ್ಗದ ಗ್ರಂಥಗಳಿಗೂ, ಎರಡು ವರ್ಗದ ಧಾರ್ಮಿಕ ವಿಧಿಕ್ರಿಯೆಗಳಿಗೂ ಅವಕಾಶ ಮಾಡಿಕೊಂಡರು. ಧರ್ಮಶಾಸ್ತ್ರಕಾರರು ಅದನ್ನೇ ಅನುಸರಿಸಿ ಒಂದೇ ಬಗೆಯ ಅಪರಾಧಕ್ಕೆ ಜಾತಿ ಆಧಾರದ ಮೇಲೆ ಬೇರೆ ಬೇರೆ ರೀತಿಯ ಶಿಕ್ಷೆಯನ್ನು ನಮೂದಿಸಿದರು. ಉದಾಹರಣೆಗೆ ಶೂದ್ರನನ್ನು ಬೈದ ಬ್ರಾಹ್ಮಣನಿಗೆ ಶಿಕ್ಷೆಯಿಲ್ಲ. ಆದರೆ ಬ್ರಾಹ್ಮಣನನ್ನು ಬೈದ ಶೂದ್ರನಿಗೆ ನಾಲಿಗೆಯನ್ನು ಕತ್ತರಿಸುವ ಶಿಕ್ಷೆ. ಹಲವಾರು ವರ್ಷಗಳವರೆಗೆ ಆಚರಿಸಿಕೊಂಡು ಬಂದ ಹಾಗೂ ಈಗ ಕೂಡಾ ಸಂಪೂರ್ಣವಾಗಿ ಬಿಟ್ಟುಕೊಡದ ಈ ಇಬ್ಬಂದಿತನದಿಂದಾಗಿ ನಮ್ಮ ರಾಷ್ಟ್ರೀಯ ಜೀವನದಲ್ಲಿ, ಚಿಂತನೆಯಲ್ಲಿ ಮಾತಿನಲ್ಲಿ, ಕೃತಿಯಲ್ಲಿ ಇಬ್ಬಂದಿತನವಿರುವುದು ಸಹಜವೆಂದು ತೋರಿದರೆ ಆಶ್ಚರ್ಯಪಡಬೇಕಾದ್ದಿಲ್ಲ.

ಎಂ.ಎಂ. ಕುಂಟೆ ಅವರ ಮಾತಿನಲ್ಲಿ ಪುರಾಣಗಳು "ಶೂದ್ರ ಸಾಹಿತ್ಯದ ವಿಶಿಷ್ಟ ಭಾಗಗಳಾಗಿವೆ.42" ಯಾದರೂ ಅಂತಿಮವಾಗಿ ಅವುಗಳ ಸೃಷ್ಟಿಗೆ ಕಾರಣರಾದವರೇ ಅವಕ್ಕೆ ಬಲಿಯಾಗಬೇಕಾದ ರೀತಿಯಲ್ಲಿ ಈ ಸಾಹಿತ್ಯವು ಜನಸಾಮಾನ್ಯರ ಮೇಲೆ ಬಲವಾದ ಹಿಡಿತವನ್ನು ಸಾಧಿಸಿತು. ವೇದಗಳನ್ನೂ, ವೈದಿಕ ಕರ್ಮಕಾಂಡವನ್ನೂ, ಜೊತೆಗೆ ಉಪನಿಷತ್ತುಗಳನ್ನೂ, ಅವುಗಳ ಜಿಜ್ಞಾಸೆಯನ್ನೂ ಬದಿಗೊತ್ತಿ ಪುರಾಣಗಳ ಭಕ್ತಿ ಸಂಪ್ರದಾಯವು ಪ್ರಾಮುಖ್ಯತೆ ಗಳಿಸತೊಡಗಿತು. ಈ ಪರಂಪರೆಯು ಒಂದೂವರೆ ಶತಮಾನಕ್ಕಿಂತ ಹೆಚ್ಚು ಕಾಲದಿಂದ ದೇಶಕ್ಕೆ ಅಗಾಧವಾದ ಹಾನಿಯನ್ನು ಉಂಟುಮಾಡಿದೆ.

ಒಂದು ಕಾಲದಲ್ಲಿ ಈ ಚಳುವಳಿಯು ಬದಲಾವಣೆಯ ಭರವಸೆಯಾಗಿತ್ತು ಎನ್ನುವುದರಲ್ಲಿ ಸಂದೇಹವಿಲ್ಲ. ರಮಾನಂದ, ಕಬೀರ್, ದಾದು, ಬಸವ, ವೇಮನ, ಗಲೀಬ್‌ದಾಸ್, ಚೈತನ್ಯ ಮತ್ತು ಇಂತಹ ಹಲವರು ಜಾತಿ ತಾರತಮ್ಯಗಳನ್ನು ವಿರೋಧಿಸಿದರಷ್ಟೇ ಅಲ್ಲದೆ ಅಸ್ಪೃಶ್ಯತೆಯ ವಿರುದ್ಧ ಕೂಡಾ ಇದ್ದರು. ಡಿ.ಪಿ. ಮುಖರ್ಜಿಯವರು ಗಮನಿಸುವಂತೆ "ಮಧ್ಯಯುಗದ ಭಾರತದಲ್ಲಿನ ಸಂತರುಗಳು ಬ್ರಾಹ್ಮಣೇತರರಾಗಿದ್ದಷ್ಟೇ ಅಲ್ಲದೆ ಕಬೀರ ಮತ್ತು ದಾದು, ರಜ್ಜಬ್‌ಇವರುಗಳು ಹಿಂದುಯೇತರರೂ ಆಗಿದ್ದರು...43 ಆದ್ದರಿಂದ ಬಹುಪಾಲಿನ ಸಂತರು ಜಾತಿಪದ್ಧತಿಯ ವಿರುದ್ಧವಷ್ಟೇ ಅಲ್ಲದೆ ಧಾರ್ಮಿಕ ವೈಷಮ್ಯದ ವಿರುದ್ಧವೂ ಬೋಧನೆಗಳನ್ನು ಕೈಗೊಂಡರು. ಆದರೆ ಅವರ ಈ ಶ್ರಮದ ಪರಿಣಾಮವೆಂದರೆ ಹಲವಾರು ಎಳೆಗಳಾಗಿ ಸಡಿಲಗೊಳ್ಳುತ್ತಿದ್ದ ಭಾರತೀಯ ಸಮಾಜದ ಹೆಣ್ಣಿಗೆಗೆ ಇನ್ನೂ ಕೆಲವು ಜಾತಿ ಮತ್ತು ಉಪಜಾತಿಗಳು ಹೆಣೆದುಕೊಂಡವು.

ನನ್ನ ಅಭಿಪ್ರಾಯದಲ್ಲಿ ಭಕ್ತಿ ಚಳುವಳಿಯು ಮತ್ತೊಂದು ಅನಿಷ್ಟತೆಗೂ ದಾರಿಮಾಡಿ ಕೊಟ್ಟಿತು. "ಭಕ್ತಿಪಂಥವು ಹಲವಾರು ದೃಷ್ಟಿಕೋನಗಳಿಂದ ವೈಚಾರಿಕತೆಯನ್ನು ವಿರೋಧಿಸಿದ ಚಳುವಳಿ" ಎನ್ನುವ ಡಿ.ಪಿ. ಮುಖರ್ಜಿ ಅವರ ಅಭಿಪ್ರಾಯವನ್ನು ನಾನು ಇಲ್ಲಿ ಅನುಮೋದಿಸುತ್ತೇನೆ. ಆದರೆ ಮಧ್ಯಯುಗದ ಸಂತರು "ಭಾವನಾತ್ಮಕ ಶಿಸ್ತಿನ ವಲಯದಲ್ಲಿ ಭಾರತೀಯ ಚೈತನದ ಸೃಜನಾತ್ಮಕ ಕ್ರಿಯೆಯ ಹೊಸ ಕಿಡಿಯನ್ನು ಹೊತ್ತಿಸಿದರು" 44 ಎನ್ನುವ ಅವರ ಮಾತನ್ನು ಒಪ್ಪಲಾರೆ.

ನಮ್ಮ ಪ್ರಮುಖ ಭಾಷೆಗಳಲ್ಲಿ ಕಂಡುಬಂದ ಭಕ್ತಿಪಂಥವು ಉತ್ತಮ ಸಾಹಿತ್ಯ ಸೃಷ್ಟಿಗೆ ಕಾರಣವಾಗಿದೆ ಎನ್ನುವುದನ್ನು ನಾನು ಅಲ್ಲಗಳೆಯುತ್ತಿಲ್ಲ. ಆದರೆ ಅದು ತಲುಪಿದ ಗುರಿಯು ಭಾವನಾತ್ಮಕ ಅಸಮತೋಲನವಾಗಿತ್ತೇಹೊರತು 'ಭಾವನಾತ್ಮಕ ಶಿಸ್ತಾಗಿರಲಿಲ್ಲ. ಮುಖರ್ಜಿ ಅವರೇ ಒಪ್ಪಿಕೊಳ್ಳುವಂತೆ ಇದು'ವೈಚಾರಿಕತೆಯ ವಿರೋಧೀ' ಚಳುವಳಿಯಾಗಿತ್ತು. ಅಲ್ಲದೆ 'ವೈಚಾರಿಕತೆಯ ವಿರೋಧೀ'ಚಳುವಳಿಯ ಗರಿಷ್ಠ ಪರಿಣಾಮವು ಭಾವನಾತ್ಮಕ ಉತ್ಸಾಹವಾದರೆ ಅದರ ದುಷ್ಪರಿಣಾಮವು ಭಾವನಾತ್ಮಕ ಅಸಮಾನತೆ ಅಥವಾ ಅಸ್ಥಿರತೆಯಾಗುತ್ತದೆ.

ಸ್ವೀಕಾರಯೋಗ್ಯವಲ್ಲದ ಮತ್ತೊಂದು ಅಂಶವೂ ಭಕ್ತಿಪಂಥದಲ್ಲಿ ಕಂಡುಬರುತ್ತದೆ. ಪಂಥದ ಪ್ರಕಾರ ಆರಾಧ್ಯ ದೈವಕ್ಕೆ ಸಂಪೂರ್ಣವಾಗಿ ಶರಣಾಗುವುದು ಮುಕ್ತಿಗೆ ಅತ್ಯಂತ ಸರಳವೂ ನಿಶ್ಚಿತವೂ ಆದ ಮಾರ್ಗ. ದೈವವನ್ನು ಪತಿಯೆಂದೂ ಭಕ್ತನನ್ನು ಪ್ರೇಮವಶನಾದ ಸತಿಯೆಂದೂ ಭಾವಿಸುವುದರ ಮೂಲಕ ಅನುಭಾವದ ಪರಮಾನಂದವನ್ನೂ ಹುಟ್ಟು-ಸಾವುಗಳ, ಈ ಕಷ್ಟಕೋಟಲೆಗಳ ನಿರಂತರತೆಯಿಂದ ಬಿಡುಗಡೆಯನ್ನು ಪಡೆಯುವುದು ಸಾಧ್ಯ. ಈ ನಂಬಿಕೆಯು ಪುರುಷನನ್ನು ಅತ್ಯಂತ ಮೆದುಗೊಳಿಸುವುದು ಮಾತ್ರವೇ ಅಲ್ಲದೆ ಅವನನ್ನು ಭಾವನಾತ್ಮಕವಾಗಿ ಅದೀನಗೊಳಿಸುವ ವಿಧಾನವೂ ಆಗಿದೆ.

ಸಂತರು ಬ್ರಾಹ್ಮಣೇತರರು ಅಷ್ಟೇ ಅಲ್ಲ, ಹಿಂದೂಯೇತರರೂ ಇದ್ದರು.

ಇವರುಗಳು ಜಾತಿಪದ್ಧತಿಯ ವಿರುದ್ಧವಷ್ಟೇ ಅಲ್ಲ; ಧಾರ್ಮಿಕ ವೈಷಮ್ಯದ ವಿರುದ್ಧವೂ ಬೋಧಿಸಿದರು.

ಮಾಯಾಧರ ಮಾನಸಿನ್ಹಾ ಹೇಳುವಂತೆ "ಮೂರು ಶತಮಾನಗಳವರೆಗೂ ಶತ್ರುಗಳ ಆಕ್ರಮಣವನ್ನು ಸಮರ್ಥವಾಗಿ ಎದುರಿಸುತ್ತಾ ಸ್ವತಂತ್ರವಾಗಿದ್ದ (ಕಳಿಂಗ) ರಾಜ್ಯದ ತೀವ್ರಗತಿಯ ಅವನತಿಗೆ ಚೈತನ್ಯ ಮತ್ತು ಅವನಿಂದ ಪ್ರಭಾವಿತರಾದ ಒರಿಯಾ ಕವಿಗಳು ಬಹುಮಟ್ಟಿಗೆ ಕಾರಣರಾಗಿದ್ದಾರೆ" 45. ಈ ಮಾತುಗಳು ಕಳಿಂಗರಾಜ್ಯಕ್ಕೆ ಮಾತ್ರವೇ ಅಲ್ಲದೆ ಭಕ್ತಿಪಂಥವು ಆಳವಾಗಿ ಬೇರುಬಿಟ್ಟ ಭಾರತದ ಹಲವಾರು ರಾಜ್ಯಗಳಿಗೂ ಅನ್ವಯಿಸುತ್ತವೆ.

ಭಾರತೀಯ ಇತಿಹಾಸವು ಪ್ರಾಚೀನ ಮತ್ತು ಮಧ್ಯ ಯುಗಗಳ ನಡುವೆ ಕನಿಷ್ಠ ಐದುಸಾವಿರ ವರ್ಷಗಳ ಕಾಲಾವಧಿಯನ್ನು ಒಳಗೊಳ್ಳುತ್ತದೆ. ಇಷ್ಟೊಂದು ಧೀರ್ಘಾವಧಿಯಲ್ಲಿ ಕಂಡುಬರುವ ಬೌದ್ಧಿಕ ಜೀವನವನ್ನು ಪರಿಶೀಲಿಸುವಾಗ ಅತ್ಯಂತ ಸ್ಪಷ್ಟವಾಗಿರುವ ಅಂಶಗಳನ್ನು ಮಾತ್ರ ಗಮನಿಸುವುದಷ್ಟೇ ಈ ಪರಿಮಿತಿಯಲ್ಲಿ ಸಾಧ್ಯ. ಆದರೂ ಈ ಕಾಲಾವಧಿಯಲ್ಲಿ ಬೆಳಕಿಗೆ ಬಂದ ಬೌದ್ಧಿಕ, ಕಲಾತ್ಮಕ ವೈಜ್ಞಾನಿಕ ಮತ್ತು ತಾಂತ್ರಿಕ ಸಾಧನೆಗಳನ್ನು ನಾನು ಗಮನಿಸಿಲ್ಲ ಎಂದಲ್ಲ. ಶೂನ್ಯವನ್ನು ಕಂಡುಹಿಡಿದ, ಪೂರಕವಾಗಿ ಅಂಕಿಗಳಿಗೆ ಸ್ಥಾನವತ್ತಾಲ್ಯವನ್ನು ನಿರ್ದೇಶಿಸಿದ ಅಜ್ಞಾತ ಪ್ರತಿಭೆಯ ಬಗ್ಗೆ ನಮಗೆ ನಿಜಕ್ಕೂ ಹೆಮ್ಮೆ ಇದೆ.

ಗಣಿತಶಾಸ್ತ್ರ, ಖಗೋಳಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಶರೀರ ಮತ್ತು ಔಷಧಶಾಸ್ತ್ರ ಹಾಗೂ ಕೈನೆಟಿಕ್ಸ್ ಮತ್ತು ಇನ್ನಿತರ ವಿಷಯಗಳಿಗೆ ಪ್ರಾಚೀನ ಭಾರತವು ನೀಡಿದ ಕೊಡುಗೆಯ ಬಗ್ಗೆಯೂ ನಮಗೆ ಹೆಮ್ಮೆಯಿದೆ. ನಮ್ಮ ಪೂರ್ವಿಕರು ವಿಮಾನಗಳನ್ನು ತಯಾರಿಸುತ್ತಿದ್ದರು. ಅಣುವಿಜ್ಞಾನದಲ್ಲಿ ಪ್ರಖಾಂಡ ಪಾಂಡಿತ್ಯವನ್ನು ಪಡೆದಿದ್ದರು ಎನ್ನುವ ಅಭಿಪ್ರಾಯಗಳನ್ನು ಮತ್ತು ಆಧುನಿಕ ಅನ್ವೇಷಣೆಗಳು ಎಂದು ಕರೆಯಲಾಗುವ ಸಂಗತಿಗಳಿಗೆ ಅಪಹೃತ ವೇದಗಳೇ ಆಧಾರ ಎನ್ನುವ ರೋಮಾಂಚಕ ಅಭಿಮಾನವನ್ನೂ ನಾವು ದೂರವಿಡುವುದು ಒಳಿತು. ನಮ್ಮ ಪ್ರಾಚೀನ ವೈಜ್ಞಾನಿಕ ಸಾಧನೆಗಳ ಬಗ್ಗೆ ಬಿ.ಕೆ. ಸರ್ಕಾರ್ ಅವರ Hindu Achi-evements in exact seience' 46 ಎನ್ನುವ ವಸ್ತುನಿಷ್ಠ ಅಧ್ಯಯನವನ್ನು ನೋಡುವುದು ಒಳ್ಳೆಯದು.

ನಮ್ಮ ಪ್ರಾಚೀನರ ಸಾಧನೆ ತಮ್ಮಷ್ಟಕ್ಕೇ ಅತಿಮುಖ್ಯವಾಗಿ ತೋರಿದರೂ ಸುದೀರ್ಘವೂ ನಿರಂತರವೂ ಆದ ಸಮಷ್ಠಿ ನಾಗರೀಕತೆಗೆ ಹೋಲಿಸಿದರೆ ಅವು ಅಷ್ಟೇನೂ ರೋಮಾಂಚನಗೊಳಿಸುವಂತಹವಲ್ಲ ಎನ್ನುವುದನ್ನೂ ನಾವು ನೆನಪಿನಲ್ಲಿಡಬೇಕು. ಒಟ್ಟಾರೆಯಾಗಿ ನೋಡಿದರೆ ಬದಲಾವಣೆಗಿಂತ ಮುಂದುವರಿಕೆಯ ಮೇಲೆ, ಅಭಿವೃದ್ಧಿಗಿಂತ ಇರುವುದನ್ನೇ ಸ್ಥಿರಗೊಳಿಸುವುದರ ಮೇಲೆ ನಾವು ಹೆಚ್ಚು ಒತ್ತುಕೊಟ್ಟಿದ್ದೇವೆ. ಆದ್ದರಿಂದಲೇ ಜ್ಞಾನದ ಹೊಸ ಸಾಧ್ಯತೆಗಳತ್ತ ಮುಂದುವರಿಯದಂತೆ ಹೊಸ ಸತ್ಯಗಳನ್ನು ಅನ್ವೇಷಿಸದಂತೆ, ಹೊಸ ಅನುಭವಗಳಿಗೆ ತೆರೆದುಕೊಳ್ಳದಂತೆ, ನಮ್ಮ ಮನಸ್ಸನ್ನು ಭವಿಷ್ಯಕ್ಕೆ ಚಾಚದೆ ಭೂತಕಾಲದ ಗೂಟಕ್ಕೆ ಬಿಗಿದುಬಿಟ್ಟಿದ್ದೇವೆ.

(ಮುಂದುವರೆಯುವುದು)

ಗ್ರಾಮಸಭೆ ಮತ್ತು ಜಿಲ್ಲಾ ಪರಿಷತ್ತುಗಳನ್ನು ರಚಿಸಿರುವ ಕರ್ನಾಟಕ ರಾಜ್ಯ ಸರ್ಕಾರ ಜನತೆಗೆ ಅಧಿಕಾರ ನೀಡುವ ಹೊಸ ಹೆಜ್ಜೆಯ ಮೂಲಕ ಸಂವಿಧಾನದ ಕನಸುಗಳಲ್ಲೊಂದನ್ನು ನನಸಾಗಿಸಿದೆ

1983ರಲ್ಲಿ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ಹೊಸ ಸರಕಾರ ಜನತೆಯ ಆಶೋತ್ತರಗಳನ್ನು ಈಡೇರಿಸಲು ಕಂಕಣಬದ್ಧವಾಯಿತು. ಜನಸಮುದಾಯದ ಜೀವನ ಮಟ್ಟ ಸುಧಾರಿಸಿ ಸಮೃದ್ಧಿ ಮತ್ತು ಸಂತಸವನ್ನು ತಂದುಕೊಡುವ ದಿಸೆಯಲ್ಲಿ ಹೊಸ ಹೊಸ ಮಾರ್ಗಗಳನ್ನು ಕಂಡುಕೊಂಡಿತು.

ಜನತೆಗೆ ಅಧಿಕಾರ:– ಪ್ರಜಾಪ್ರಭುತ್ವದಲ್ಲಿ "ಪ್ರಜೆಯೇ ಪ್ರಭು" ಎಂಬ ತತ್ವದಲ್ಲಿ ಅಚಲವಾದ ನಂಬಿಕೆ ಇಟ್ಟಿರುವ ಕರ್ನಾಟಕ ಸರಕಾರ, ಪ್ರಜಾಪ್ರಭುತ್ವ ಅರ್ಥಪೂರ್ಣವಾಗಬೇಕಾದರೆ ಆಡಳಿತದಲ್ಲಿ ಜನತೆಯ ಸಕ್ರಿಯ ಪಾತ್ರ ಅತ್ಯಂತ ಅಗತ್ಯ ಎಂಬುದನ್ನು ಮನಗಂಡಿದೆ.

ಇದಕ್ಕೆ ಮುಖ್ಯವಾಗಿ ಬೇಕಾದದ್ದು ಅಧಿಕಾರ ವಿಕೇಂದ್ರೀಕರಣ. ಆದ್ದರಿಂದಲೇ ಪಂಚಾಯತಿ ರಾಜ್ಯ ಸಂಸ್ಥೆಗಳನ್ನು ರಚಿಸಿ, ಗ್ರಾಮೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿ ಕಾರ್ಯಗಳಲ್ಲಿ ಜನತೆ ನೇರವಾಗಿ ಪಾಲುಗೊಳ್ಳುವ ವ್ಯಾಪಕ ಅವಕಾಶಗಳನ್ನು ಕಲ್ಪಿಸಿದೆ.

ಈ ಗುರಿ ಸಾಧನೆಗಾಗಿ ಎರಡು ಪ್ರಮುಖ ಚುನಾವಣಾ ಸುಧಾರಣೆಗಳನ್ನು ಕಾರ್ಯಗತಗೊಳಿಸಲಾಗಿದೆ. ಮೊದಲನೆಯ ಯುವ ಸಮೂಹ ಸಾರ್ವಜನಿಕ ವಿಚಾರಗಳಲ್ಲಿ ತಮ್ಮ ಅಭಿಮತ ವ್ಯಕ್ತಪಡಿಸಲು ಅನುಕೂಲವಾಗುವಂತೆ ಮತದಾನದ ವಯೋಮಿತಿಯನ್ನು 18 ವರ್ಷಗಳಿಗೆ ಇಳಿಸಿರುವುದು, ಎರಡನೆಯದು; ಈ ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡ 20ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾಗಿಟ್ಟಿರುವುದು. ಇದರಿಂದ ಮಹಿಳೆಯರು ರಾಷ್ಟ್ರಾಭಿವೃದ್ಧಿ ಕಾರ್ಯಗಳಲ್ಲಿ ಹೆಚ್ಚಿನ ಪಾತ್ರ ವಹಿಸಲು ನೆರವಾಗಿದೆ.

ಈಗ ಪಂಚಾಯತಿ ರಾಜ್ಯ ವ್ಯವಸ್ಥೆಯ ಮೊದಲ ವರ್ಷವೇ ಜಿಲ್ಲಾ ಪರಿಷತ್ತುಗಳು ಮತ್ತು ಮಂಡಲ ಪಂಚಾಯತಿಗಳಿಗೆ 900 ಕೋಟಿ ರೂಪಾಯಿಗಳನ್ನು ಸರಕಾರ ನೀಡುತ್ತದೆ.

ಪಂಚಾಯತಿ ರಾಜ್ಯ ವ್ಯವಸ್ಥೆಯ ಅನುಷ್ಠಾನದಿಂದ ರಾಜ್ಯದಲ್ಲಿ 2469 ಮಂಡಲ ಪಂಚಾಯತಿಗಳು ಮತ್ತು ಜಿಲ್ಲಾ ಪರಿಷತ್ತುಗಳು ಅಸ್ತಿತ್ವಕ್ಕೆ ಬಂದಿವೆ.

ಈ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಪ್ರದೇಶದ ಪ್ರಗತಿಪರ ಕಾರ್ಯಗಳನ್ನು ರೂಪಿಸಿ ಅನುಷ್ಠಾನಗೊಳಿಸುವ ಹಿರಿಯ ಹೊಣೆ ಹೊತ್ತಿವೆ. ಈ ಮಂಡಲ ಪಂಚಾಯತಿಗಳು ಮತ್ತು ಜಿಲ್ಲಾ ಪರಿಷತ್ತುಗಳೇ ನಿಜವಾದ ಅರ್ಥದಲ್ಲಿ ಅಭಿವೃದ್ಧಿ ಕಾರ್ಯ ನಿರ್ವಹಿಸುವ ಮೂಲ ಘಟಕಗಳು.

ಪ್ರಥಮ ಬಾರಿಗೆ ಸಮನಾದ ಪ್ರಾಥಮಿಕ ಹಂತದಿಂದ ಸುಮಾರು 56,000 ; ಪ್ರಜಾಪ್ರತಿನಿಧಿಗಳು ಆಯ್ಕೆಯಾಗಿದ್ದಾರೆ. ಇದರಲ್ಲಿ 29,051 ಜನಸಾಮಾನ್ಯ ವರ್ಗದ ಪ್ರತಿನಿಧಿಗಳು, 11887 ಜನ ಪರಿಶಿಷ್ಟ ಜನಾಂಗದ ಪ್ರತಿನಿಧಿಗಳು ಹಾಗೂ 14356 ಮಹಿಳಾ ಪ್ರತಿನಿಧಿಗಳಿದ್ದಾರೆ. ಮಹಿಳೆಯರಲ್ಲಿ 2469 ಜನ ಪರಿಶಿಷ್ಟ ಜನಾಂಗದ ಪ್ರತಿನಿಧಿಗಳು. ಇವರ ಜೊತೆಗೆ ಜಿಲ್ಲಾ ಪರಿಷತ್ತುಗಳಿಗೆ 887 ಸದಸ್ಯರು ಆಯ್ಕೆಯಾಗಿದ್ದಾರೆ.

1987ರ ಜನವರಿ 2 ಮತ್ತು 20 ರಂದು ನಡೆದ ಚರಿತ್ರಾರ್ಹ ಚುನಾವಣೆಗಳಲ್ಲಿ 1,82,18,177 ಜನ ಮತದಾರರು ಮತ ಚಲಾಯಿಸಿ ತಮ್ಮ ಪಕ್ವ ಅಭಿಮತ ವ್ಯಕ್ತಪಡಿಸಿದ್ದಾರೆ.

ಪ್ರಜಾಪ್ರಭುತ್ವದ ಮೂಲ ಈ ಹೆಮ್ಮೆಯ ನಾಡಿನ ಮಣ್ಣಿನ ಮಕ್ಕಳಲ್ಲಿ ಅಡಗಿದೆ ಎಂಬುದನ್ನು ಶ್ರುತಪಡಿಸುವ ಕರ್ನಾಟಕದ ಜನ ಸಮುದಾಯ ನಿಜಕ್ಕೂ ಅಭಿನಂದನಾರ್ಹ.

● ಕರ್ನಾಟಕ ವಾರ್ತೆ

ಚಂದ್ರಗುತ್ತಿ ಜಾತ್ರೆ ರದ್ದುಪಡಿಸಲು ಒತ್ತಾಯಿಸಿ

ದಲಿತ ಸಂಘರ್ಷ ಸಮಿತಿಯ ಕರಪತ್ರ

ಬೆತ್ತಲೆ ಸೇವೆ ನಿಲ್ಲಿಸಿ ಹೆಣ್ಣಿನ ಮಾನ ಉಳಿಸಿ

ಭಾರತವು ಸಂಸ್ಕೃತಿಯ ತವರು ಎಂದು ಮೊದಲಿನಿಂದಲೂ ಖ್ಯಾತಿ ಪಡೆದಿದೆ. ಇಡೀ ವಿಶ್ವಕ್ಕೆ ಸಂಸ್ಕೃತಿಯ ಪಾಠವನ್ನು ಕಲಿಸಿದೆ. ಆದ್ದರಿಂದಲೇ ಈ ದೇಶವನ್ನು ವಿಶ್ವಗುರು ಎಂದು ಪ್ರಾಚೀನರು ಕರೆದರು. ನಮ್ಮಿಂದ ಸಂಸ್ಕೃತಿಯ ಪಾಠ ಕಲಿತ ವಿಶ್ವದ ಹಲವು ದೇಶಗಳು ತಮ್ಮ ಮೌಢ್ಯದ ಕೂಪದಿಂದ ಹೊರಬಂದು ಹೊಸ ನಾಗರಿಕತೆಯ ಬೆಳಕಿನತ್ತ ಮುನ್ನಡೆಯುತ್ತಿದ್ದರೆ, ನಾವು ಅದೇ ಮೌಢ್ಯದ ಕೂಪದತ್ತ ಹಿನ್ನಡೆಯುತ್ತಿದ್ದೇವೆ. ಇದು ನಮ್ಮ ದೇಶದ ಒಂದು ದುರಂತ. ದೇವರು- ಧರ್ಮದ ಹೆಸರಿನಲ್ಲಿ ಅನೇಕ ರೀತಿಯ ಮೂಢನಂಬಿಕೆಗಳು ನೂರಾರು ವರ್ಷಗಳಿಂದ ನಮ್ಮ ಜನರನ್ನು ಕಿತ್ತು ತಿನ್ನುತ್ತಿವೆ. ಈ ಎಲ್ಲ ಮೌಢ್ಯಕ್ಕೆ, ದುರಂತಕ್ಕೆ ನಮ್ಮ ಪುರೋಹಿತಶಾಹಿಗಳೇ ಕಾರಣ ಎಂದು ಬೇರೆ ಹೇಳಬೇಕಾಗಿಲ್ಲ. ಬಡವರ ಅಜ್ಞಾನ, ಮೌಢ್ಯ ಹಾಗೂ ವಿಧೇಯತೆಯನ್ನು ದುರುಪಯೋಗಪಡಿಸಿಕೊಂಡು, ಅವರ ಬೆವರಿನಿಂದ ತಾವು ಸುಖಜೀವನ ನಡೆಸುತ್ತಾ ತಮ್ಮ ಲೈಂಗಿಕ ತೃಷೆಗೆ ಅವರಲ್ಲಿ ಅನಾಗರಿಕವಾದ ಮೂಢ ಪದ್ಧತಿಗಳನ್ನು ತುರುಕಿ, ನಂಬಿಸಿ ಅದಕ್ಕೆ ತಕ್ಕಂತೆ ಕಥೆ ಹೆಣೆದು ಅದು ಅವರ ಮನದಾಳದಲ್ಲಿ ಬಲವಾಗಿ ಬೇರೂರುವಂತೆ ಮಾಡಿದರು. ಇಂತಹ ಪದ್ಧತಿಗಳಲ್ಲಿ ನಮ್ಮ ಕರ್ನಾಟಕದ ಮಟ್ಟಿಗೆ ಹೇಳಬೇಕಾದವುಗಳೆಂದರೆ 1) ಚಂದ್ರಗುತ್ತಿಯ ಬೆತ್ತಲೆ ಸೇವೆ, 2) ಸವದತ್ತಿಯ ದೇವದಾಸಿ 3) ಬಳ್ಳಾರಿಯ ಓಕುಳಿ ಆಟ ಮುಂತಾದುವುಗಳು, ವಿಶೇಷವೆಂದರೆ ದೇವರ ಹೆಸರಿನಲ್ಲಿರುವ ಈ ಕ್ರೂರ ಪದ್ಧತಿಗಳಿಗೆ ಸ್ತ್ರೀಯರೇ ಬಲಿಪಶುಗಳು.

ಚಂದ್ರಗುತ್ತಿಯ ಗುತ್ಯಮ್ಮನ ಹೆಸರಿನಲ್ಲಿ ನಡೆಯುವ ಬೆತ್ತಲೆಸೇವೆಗೆ ನೂರಾರು ವರ್ಷಗಳ ಇತಿಹಾಸವಿದೆ. ಇದು ಬರ್ಬರ. ಪೈಶಾಚಿಕ ಕೃತ್ಯ; ಮೌಢ್ಯದ ಪರಮಾವಧಿ ಎಂಬುದು ಸತ್ಯ. ಆದ್ದರಿಂದಲೇ ನೂರಾರು ವರ್ಷಗಳ ಹಿಂದೆ ದಾಸಶ್ರೇಷ್ಠರಾದ ಕನಕದಾಸರು ಕೂಡ ಈ ಬೆತ್ತಲೆ ಸೇವೆಯನ್ನು ಕಟುವಾಗಿ ಟೀಕಿಸಿದ್ದಾರೆ ಅಂದಮೇಲೆ ಆಧುನಿಕ ಯುಗದಲ್ಲಿ, 21ನೇ ಶತಮಾನಕ್ಕೆ ಕಾಲಿಡುತ್ತಿರುವ ದಿನಗಳಲ್ಲಿಯೂ ಇಂಥ ಮೂಢ ಪದ್ಧತಿ ಮುಂದುವರೆಯುತ್ತಿದೆ ಎಂದರೆ ನಾವೆಲ್ಲರು ತಲೆತಗ್ಗಿಸಬೇಕಾದ ವಿಷಯ ಮತ್ತು ಭಾರತೀಯ ಸಂಸ್ಕೃತಿಗೆ, ಸ್ತ್ರೀ ಕುಲಕ್ಕೆ ಕಳಂಕ. ಇದನ್ನು ಮನಗಂಡೇ ದ.ಸಂ.ಸ.ವು ಈ ಪದ್ಧತಿಯನ್ನು ತೊಡೆದುಹಾಕಿ ಸ್ತ್ರೀ ಕುಲದ ಮಾನಹರಣವಾಗುವುದನ್ನು ತಡೆಗಟ್ಟುವ ದಿಸೆಯಲ್ಲಿ ಕಳೆದ ಮೂರು ವರ್ಷಗಳಿಂದ ಅನೇಕ ಕಾರ್ಯಕ್ರಮಗಳ ಮೂಲಕ ಜನ ಜಾಗೃತಿ ಮಾಡುತ್ತಿದೆ.

ಈ ಕಾರಣಕ್ಕಾಗಿಯೇ ದ.ಸಂ.ಸ.ವು ಕಳೆದ ಬಾರಿ (1986) ತನ್ನ ಕಾರ್ಯಕ್ರಮವನ್ನು ತೀವ್ರಗೊಳಿಸಿ ಜನರನ್ನು ತಲುಪುವ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಸಾಕಷ್ಟು ಯಶಸ್ಸು ಸಾಧಿಸಿತು. ಜಾತ್ರೆಯ ದಿನಗಳಲ್ಲಿ ಕೂಡ ಭಕ್ತಾದಿಗಳಿಗೆ ಕೈಮುಗಿದು ಪ್ರಾರ್ಥಿಸಿ ಮನ ಒಲಿಸುವ ಮೂಲಕ ಅವರು ಬಟ್ಟೆ ತೊಟ್ಟು ಪೂಜೆ ಸಲ್ಲಿಸುವಂತೆ ಮಾಡುವಲ್ಲಿ ಯಶಸ್ವಿಯಾಯಿತು. ಆದರೆ ನಮ್ಮ ಯಶಸ್ಸನ್ನು ಸಹಿಸದ ಕೆಲವು ಮತಾಂಧ ಶಕ್ತಿಗಳು, ಸಮಾಜ ದ್ರೋಹಿ ಶಕ್ತಿಗಳು ಉಂಟುಮಾಡಿದ ದುರ್ಘಟನೆ ಎಲ್ಲರಿಗೂ ತಿಳಿದದ್ದೇ. ಅದೀಗ ಇತಿಹಾಸಕ್ಕೆ ಸೇರಿಹೋಗಿದೆ. ಈ ಸಮಯದಲ್ಲಿ ನಡೆದ ಕ್ರೂರ ಹಲ್ಲೆಯಲ್ಲಿ ನಮ್ಮನ್ನು ಹಲ್ಲೆಕೋರರಿಂದ ಕಾಪಾಡಿದವರು ಮುಗ್ಧ ಭಕ್ತರೇ. ಮಾನವತೆಯುಳ್ಳ ಈ ಮುಗ್ಧ ಭಕ್ತರ ಬಗ್ಗೆ ದ.ಸಂ.ಸ. ಹೆಮ್ಮೆಪಡುತ್ತದೆ ಮತ್ತು ಅಂಥ ಸಾವಿರಾರು ಮಾನವಂತ ಹೃದಯಿಗಳಿಗೆ ದ.ಸಂ.ಸ. ಸಹಸ್ರ ವಂದನೆಗಳನ್ನು ಅರ್ಪಿಸುತ್ತದೆ. ದ.ಸಂ.ಸ.ವು ಜನರ ಭಾವನೆಗಳನ್ನು ಕೆರಳಿಸಲು, ಧರ್ಮದ ಮೂಲಕ್ಕೆ ಕೈಹಾಕಲು ಎಂದೂ ಇಚ್ಛಿಸುವುದಿಲ್ಲ, ಆದರೆ ಧರ್ಮ, ದೇವರ ಹೆಸರಿನಲ್ಲಿ ನಡೆಯುವ ಶೋಷಣೆಯನ್ನು ವಿರೋಧಿಸುತ್ತದೆ.

ಈ ಬಾರಿಯೂ ಚಂದ್ರಗುತ್ತಿಯ ಜಾತ್ರೆ ಸಮೀಪಿಸುತ್ತಿದೆ. ತಾ॥ 9-3-87ರಂದು ನಡೆಯಲಿದೆ. ಕಳೆದ ಬಾರಿಯ ದುರ್ಘಟನೆಯಿಂದ ನಾವಾರೂ ಕಂಗೆಟ್ಟಿಲ್ಲ; ಹಿಂದೆ ಸರಿದಿಲ್ಲ. ನಮಗೆ ಗೊತ್ತು, ಸಹೃದಯ ಭಕ್ತರು ನಮ್ಮೊಡನೆ ಸಹಕರಿಸುತ್ತಾರೆ ಎಂದು. ಆದ್ದರಿಂದ ಈ ಬಾರಿಯೂ ಜಾತ್ರೆಗೆ ಸಂಬಂಧಿಸಿದಂತೆ ಪೂರ್ವಭಾವಿಯಾಗಿ ದ.ಸಂ.ಸ.ವು ಅನೇಕ ಕಾರ್ಯಕ್ರಮಗಳ ಮೂಲಕ ಜನರನ್ನು ತಲುಪಲು ಪ್ರಯತ್ನಿಸುತ್ತಿದೆ. ಸ್ತ್ರೀಕುಲಕ್ಕೆ ಮತ್ತು ನಾಗರಿಕ ಸಮಾಜಕ್ಕೆ ಸವಾಲಾಗಿರುವ ಈ ಹೀನ ಕೃತ್ಯ ನಿಲ್ಲಿಸಲು ದ.ಸಂ.ಸ.ವು ಮಾನವೀಯ ಮೌಲ್ಯದಲ್ಲಿ ನಂಬಿಕೆಇರುವ ಎಲ್ಲಾ ಪ್ರಗತಿಪರ ಸಂಘಸಂಸ್ಥೆಗಳನ್ನು, ಅದರಲ್ಲೂ ವಿಶೇಷವಾಗಿ ಮಹಿಳಾ ಸಂಘಟನೆಗಳನ್ನು, ನಾಗರಿಕರನ್ನು ಆಹ್ವಾನಿಸುತ್ತದೆ, ಮನವಿ ಮಾಡಿಕೊಳ್ಳುತ್ತದೆ. ಬನ್ನಿರಿ! ನಾವೆಲ್ಲರೂ ಸೇರಿ ಅನಾಗರಿಕ ಬೆತ್ತಲೆ ಸೇವೆ ನಿಲ್ಲಿಸೋಣ!! ನವಸಮಾಜ ಕಟ್ಟೋಣ!!!

ವ್ಯವಸ್ಥೆ
ಕ.ದ.ಸಂ.ಸ. ರಾಜ್ಯ ಸಮಿತಿ

ದ.ಸಂ.ಸ. ಸಂವಿಧಾನ ತಿದ್ದುಪಡಿ

1984 ನವೆಂಬರ್ 19ರಂದು ಧಾರವಾಡದಲ್ಲಿ ಅಂಗೀಕರಿಸಿದ ದ.ಸಂ.ಸ. ಸಂವಿಧಾನಕ್ಕೆ ಪ್ರಥಮ ಬಾರಿಗೆ ಕೆಲವು ತಿದ್ದುಪಡಿಗಳನ್ನು ಮಾಡಲಾಯಿತು. ಪ್ರಮುಖರಾದವೆಂದರೆ ರಾಜ್ಯ ಸಮಿತಿ ಅವಧಿಯನ್ನು 2 ವರ್ಷಗಳಿಂದ 3 ವರ್ಷಗಳಿಗೆ ಹೆಚ್ಚಿಸಲಾಗಿದೆ. ರಾಜ್ಯದ 4 ರೆವಿನ್ಯೂ ವಿಭಾಗಗಳಿಗೆ 4 ಜನ ವಿಭಾಗ ಸಂಚಾಲಕರನ್ನು ಆರಿಸುವುದು. ಇವರು ರಾಜ್ಯ ಕಾರ್ಯಕಾರಿ ಸಮಿತಿಯ ಸದಸ್ಯರೂ ಆಗಿರುತ್ತಾರೆ. ಗ್ರೂಪ್ ಪಂಚಾಯ್ತಿ ಮತ್ತು ಹೋಬಳಿ ಶಾಖೆಗಳನ್ನು ಬದಲಿಸಿ ಗ್ರಾಮ ಮತ್ತು ಮಂಡಲ ಶಾಖೆಗಳನ್ನು ರಚಿಸಲಾಗಿದೆ. ಇದಲ್ಲದೆ ಶಿಸ್ತು ಮತ್ತು ಇನ್ನಿತರ ವಿಚಾರದಲ್ಲೂ ಕೆಲವಾರು ತಿದ್ದುಪಡಿಗಳನ್ನು ಅಂಗೀಕರಿಸಲಾಗಿದೆ.

ಚಂದಾ ವಿವರ

ಬಿಡಿಪ್ರತಿ :	1 ರೂ.
ವಾರ್ಷಿಕ ಚಂದಾ :	25 ರೂ.
ಆಜೀವ ಚಂದಾ :	250 ರೂ.

ಡಿ. ಡಿ. ಅಥವಾ ಎಂ. ಓ. ಮೂಲಕ ಮಾತ್ರ ಚಂದಾ ಸ್ವೀಕರಿಸಲಾಗುವುದು.

ದಸಂಸ ಪದಾಧಿಕಾರಿಗಳ ಆಯ್ಕೆ

(ಹಾಸನ) 26 ಮತಗಳನ್ನೂ ಪಡೆದರು. ರಾಜ್ಯ ಸಮಿತಿ ಖಜಾಂಚಿ ಸ್ಥಾನಕ್ಕೆ ಮೂವರು ಅಭ್ಯರ್ಥಿಗಳು ಸ್ಪರ್ಧಿಸಿದ್ದು, ಕೃಷ್ಣಪ್ಪ (ಮುಳಬಾಗಿಲು) 5 ಮತಗಳು, ಎ. ಹನುಮಂತಪ್ಪ (ಹರಿಹರ) 73 ಮತಗಳು ಹಾಗೂ ವಿ. ಶಂಬಯ್ಯ (ಮೈಸೂರು) 89 ಮತಗಳನ್ನೂ ಪಡೆದರು.

ಬೆಳಗ್ಗೆ 11 ಗಂಟೆಗೆ ಪ್ರಾರಂಭವಾದ ಆಯ್ಕೆ ಸಮಿತಿ ಸಭೆಯಲ್ಲಿ ರಾಜ್ಯದ ಎಲ್ಲ ಮೂಲೆಗಳಿಂದ ಬಂದ ಪ್ರತಿನಿಧಿಗಳ ಸಭೆಯನ್ನು ಭದ್ರಾವತಿಯ ಗಿರಿಯಪ್ಪ ಅವರು ಉದ್ಘಾಟಿಸಿದರು. ಸಭೆಯ ಅಧ್ಯಕ್ಷತೆಯನ್ನು ಮಾಜಿ ರಾಜ್ಯ ಸಂಚಾಲಕ ದೇವನೂರ ಮಹಾದೇವ ಅವರು ವಹಿಸಿದ್ದರು. ಮಂಡ್ಯ ಜಿಲ್ಲಾ ಸಂಚಾಲಕ ನಾರಾಯಣ್ ಅವರು ರಾಜ್ಯ ಸಮಿತಿ ಪರವಾಗಿ ದ.ಸಂ.ಸ. ಸಂವಿಧಾನಕ್ಕೆ ತಿದ್ದುಪಡಿಗಳನ್ನು ಮಂಡಿಸಿದರು. ಬೆಂಗಳೂರು ಜಿಲ್ಲಾಸಂಚಾಲಕ ಮುನಿಯಲ್ಲಪ್ಪರು ಅನುಮೋದಿಸಿದರು ಮತ್ತು ಸಭೆ ತಿದ್ದುಪಡಿಗಳನ್ನು ಸರ್ವಾನುಮತದಿಂದ ಅಂಗೀಕರಿಸಿತು.

ರಾಜ್ಯ ಸಂಚಾಲಕರಾದ ಸಿ.ಎಂ. ಮುನಿಯಪ್ಪನವರು ಹಿಂದಿನ 2 ವರ್ಷಗಳ ಅವಧಿಯ ವರದಿಯನ್ನು ಓದಿದರು. ದಶಕ ದಾಟಿದ ಸಂಘಟನೆಯಲ್ಲಿ ಸಂಘಟನೆ, ಸಾಧನೆಗಳು ಮತ್ತು ಎದುರಿಸಿದ ಬಿಕ್ಕಟ್ಟುಗಳನ್ನು ಗುರುತಿಸಿದ ಅವರು ಪ್ರಜಾತಾಂತ್ರಿಕ ವಿಧಾನಗಳನ್ನು ಅನುಸರಿಸಿ ಸಂಘಟನೆ ಬಲಗೊಳಿಸುವುದು ನಮ್ಮ ಹೊಣೆಯಾಗಿದೆ ಎಂದರು.

ರಾಜ್ಯ ಸಮಿತಿ ಖಜಾಂಚಿ ರಂಗಸ್ವಾಮಿ ಬೆಲ್ಲದಮಡು ಅವರು ಹಣಕಾಸು ವರದಿ ಒಪ್ಪಿಸಿ, ಸಂಘಟನೆ ಎದುರಿಸುತ್ತಿರುವ ಆರ್ಥಿಕ ಸಮಸ್ಯೆಗೆ ಪರಿಹಾರ ರೂಪುಗೊಳ್ಳಬೇಕಿದೆ ಎಂದರು.

ಎರಡನೇ ಅಧಿವೇಶನ ಊಟದ ನಂತರ ಚುನಾವಣೆಯೊಂದಿಗೆ 3 ಗಂಟೆಗೆ ಪ್ರಾರಂಭವಾಯಿತು. ಚುನಾವಣಾಧಿಕಾರಿಯಾಗಿ ಸಮರ್ಥವಾಗಿ ಕಾರ್ಯ ನಿರ್ವಹಿಸಿದ ಗುಡಿಬಂಡೆ ಕೆ. ನಾರಾಯಣಸ್ವಾಮಿಯವರು ಸಂಜೆ 5.30ಕ್ಕೆ ಫಲಿತಾಂಶಗಳನ್ನು ಪ್ರಕಟಿಸಿದರು. ●

ಡಿ.ಎಸ್.ಎಫ್. ಪ್ರತಿಭಟನೆ

ಕ್ಯಾರಿ ಓವರ್ ಪದ್ಧತಿಗೆ ಒಳಪಟ್ಟ ದಲಿತ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯವನ್ನು ರದ್ದುಗೊಳಿಸಿ ಜನತಾ ಸರ್ಕಾರ ಹಿಂದಿನ ವರುಷ ಆಜ್ಞೆ ಹೊರಡಿಸಿತು. ರಾಜ್ಯಾದ್ಯಂತ ದಲಿತ ವಿದ್ಯಾರ್ಥಿಗಳಿಂದ ಪ್ರತಿಭಟನೆಗಳು ಬಂದವು. ಹಾಸ್ಟೆಲ್ ಸೌಲಭ್ಯವನ್ನು ಮುಂದುವರಿಸುವುದಾಗಿ ಹೇಳಿದ ಜನತಾ ಸರ್ಕಾರ. ಒಂದು ವರುಷದ ಅವಧಿಗೆ ಮಾತ್ರ ಮುಂದುವರಿಸಿ ಆಜ್ಞೆ ಹೊರಡಿಸಿತು. ಮುಂದಿನ ವರುಷದಿಂದ ಮತ್ತೆ ಅದೇ ಸಮಸ್ಯೆಯನ್ನು ಎದುರಿಸುವ ವಿದ್ಯಾರ್ಥಿಗಳು ಹಾಸ್ಟೆಲ್ ಸೌಲಭ್ಯ ರದ್ದುಗೊಳಿಸುವ ಆಜ್ಞೆಯನ್ನು ಹಿಂತೆಗೆದುಕೊಂಡು ವಿಶ್ವವಿದ್ಯಾನಿಲಯಗಳಲ್ಲಿ ಕ್ಯಾರಿಓವರ್ ಪದ್ಧತಿ ಇರುವವರೆಗೂ ಹಾಸ್ಟೆಲ್ ಸೌಲಭ್ಯ ಒದಗಿಸಬೇಕೆಂದು ರಾಜ್ಯಾದ್ಯಂತ 12-2-87 ರಂದು ಪ್ರತಿಭಟನಾ ಮೆರವಣಿಗೆ ನಡೆಸಿ, ಸರ್ಕಾರವನ್ನು ಒತ್ತಾಯಿಸಿದರು.

ದಲಿತ ವಿದ್ಯಾರ್ಥಿಗಳ ಅನ್ನ ಕಿತ್ತುಕೊಂಡ ಜನತಾ ಸರ್ಕಾರದ ವಿರುದ್ಧ ಕುಸಿದ ಕೆಳವರ್ಗದ ನಾಯಕತ್ವವಿರುವ ತುಮಕೂರುಜಿಲ್ಲೆಯ ನಗರದ ದಲಿತ ವಿದ್ಯಾರ್ಥಿಗಳು ಪ್ರತಿಭಟನೆ ಸಲ್ಲಿಸಿದರು. ರಾತ್ರಿ ಕತ್ತಲು ಸೀಳಿ ಸೂರ್ಯನ ಕಳೆ ಏರುತ್ತಿದ್ದಂತೆ ನಗರದ ಮೂಲೆ ಮೂಲೆಗಳಿಂದ ಸಾವಿರಾರು ಜನ ವಿದ್ಯಾರ್ಥಿಗಳು ಬಿ.ಹೆಚ್. ರಸ್ತೆಯಲ್ಲಿರುವ ಎ.ಕೆ. ಬೋರ್ಡಿಂಗ್ ಹೋಂ ಆವರಣದಲ್ಲಿ ಸೇರಿಕೊಂಡರು. ವಿದ್ಯಾರ್ಥಿಗಳ ಹಾಸ್ಟಲ್ ನೌಕರರು ಸಹ ತಮ್ಮ ಸಂಘಟನೆಯ ಬ್ಯಾನರ್ ಹಿಡಿದು ವಿದ್ಯಾರ್ಥಿಗಳೊಂದಿಗೆ ಪ್ರಥಮ ಬಾರಿಗೆ ಬೆರೆತರು.

3000 ವಿದ್ಯಾರ್ಥಿ ವಿದ್ಯಾರ್ಥಿನಿಯರು ಶಿಸ್ತಿನಿಂದ ನಗರದ ಪ್ರಮುಖ ಬೀದಿಗಳಲ್ಲಿ ಅನ್ನ ಕಿತ್ತುಕೊಂಡ ಸರ್ಕಾರಕ್ಕೆ ಧಿಕ್ಕಾರ, ದಲಿತ ವಿದ್ಯಾರ್ಥಿನಿಯರ ಹಾಸ್ಟಲ್ ಕಟ್ಟಡ ಪೂರ್ಣಗೊಳಿಸಿ, ಹಾಸ್ಟಲ್ ನೌಕರರನ್ನು ಖಾಯಂಗೊಳಿಸಿ, ಕ್ಯಾರಿಓವರ್ ಪದ್ಧತಿಗೆ ಗೊಳಪಡುವ ವಿದ್ಯಾರ್ಥಿಗಳಿಗೆ ಹಾಸ್ಟಲ್ ಸೌಲಭ್ಯ ಕೊಡಿ, ಬೆಲೆ ಏರಿಕೆಗೆ ತಕ್ಕಂತೆ ವಿದ್ಯಾರ್ಥಿ ವೇತನ ಹೆಚ್ಚಿಸಿ ಎಂಬ ಘೋಷಣೆಗಳನ್ನು ಕೂಗುತ್ತಾ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಸೇರಿದರು.

ಜಿಲ್ಲಾಧಿಕಾರಿಗಳ ಗೈರು ಹಾಜರಿಯಲ್ಲಿ ಗೆಜೆಟೆಡ್ ಅಸಿಸ್ಟೆಂಟ್ ಅವರು ಮನವಿ ಸ್ವೀಕರಿಸಿದರು.

ರಾಜಧಾನಿಯೂ ಸೇರಿದಂತೆ ರಾಜ್ಯದ 15 ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ಅನೇಕ ತಾಲ್ಲೂಕು ಕೇಂದ್ರಗಳಲ್ಲಿ ದಲಿತ ವಿದ್ಯಾರ್ಥಿ ಒಕ್ಕೂಟದಿಂದ ಪ್ರತಿಭಟನೆಗಳು ನಡೆದಿವೆ.

● ಕಲಾ ರಾಜ

ನನ್ನ ಬೀಜ ಹೊರಗೆ

ಒಂದು ಸಾರಿ ಹೀಗೆ ತರಕಾರಿ ಹಣ್ಣು-ಹಂಪಲುಗಳ ಸಭೆ ಸೇರಿತು. ಸಭೆಯ ವಿಚಾರ ಯಾರು ಹೆಚ್ಚು ಎನ್ನುವುದು. ಪರಸ್ಪರ ಜಗಳವಾಡಿದವು. ಕಚ್ಚಾಡಿದವು. ನಂತರ ಪ್ರತಿಯೊಂದೂ ತಮ್ಮಲ್ಲಿರುವ ವಿಶೇಷ ಗುಣದಿಂದ ತಾನು ಹೆಚ್ಚು ಅನ್ನುವುದನ್ನು ಪ್ರತಿಷ್ಠಾಪಿಸಲು ಪ್ರಯತ್ನಿಸಿದವು. ಪಡುವಲ ಕಾಯಿ ತಾನು ಉದ್ದ ಎಂದು ವಾದಿಸಿತು. ಕುಂಬಳ ಕಾಯಿ ತನಗಿಂತ ಯಾರು ದಪ್ಪವಿಲ್ಲ ಎಂದಿತು. ಹಲಸಿನ ಹಣ್ಣು ನನ್ನ ಮೈಯ್ಯಲ್ಲಿ ಮಾತ್ರ ಮುಳ್ಳು ಎಂದಿತು. ವಿಶೇಷ ಹುಳಿ ತನ್ನದೆಂದು ಪಟ್ಟುಹಿಡಿಯಿತು ನೆಲ್ಲಿಕಾಯಿ. ಹೀಗೆ ತರಾವರಿ ತರಕಾರಿಗಳು ಆಕಾರ, ರುಚಿ, ಗಾತ್ರವನ್ನು ಮುಂದಿಟ್ಟು ವಾದ ಮಾಡುತ್ತಿದ್ದವು. ಮೂಲೆಯಲ್ಲಿ ಗೇರು ಹಣ್ಣು ಸಪ್ಪಗೆ ಕುಳಿತು ಇದನ್ನೆಲ್ಲಾ ನೋಡುತ್ತಿತ್ತು, ಅದನ್ನು ಯಾರೂ ಗಮನಿಸಲಿಲ್ಲ. ಅದಕ್ಕೆ ಸಿಟ್ಟು ಬಂತು. ಎಲ್ಲರೂ ತಮ್ಮ ತಮ್ಮ ಹೆಚ್ಚುಗಾರಿಕೆಯನ್ನು ಹೇಳುವಾಗ ತಾನೂ ಎದ್ದು ನಿಂತಿತು. ಸಭೆಯನ್ನು ಕುರಿತು, "ನಿಮ್ಮಗಳಿಗಿಂತ ನಾನೇ ಹೆಚ್ಚು. ಹೇಗೆಂದರೆ, ನಿಮ್ಮಲ್ಲಿ ಇರುವ ಅಂಶಗಳಿಗಿಂತ ವಿಶಿಷ್ಟವಾದ ಅಂಶ ನನ್ನಲ್ಲಿ ಇದೆ. ನೀವು ನಿಮ್ಮ ಬೀಜಗಳನ್ನು ಒಳಗೆ ಇಟ್ಟುಕೊಂಡಿದ್ದೀರಿ. ಆದರೆ ನನ್ನ ಬೀಜ ಹೊರಗೆ. ಆದುದರಿಂದ ನಾನೇ 'ನಿಮಗಿಂತ ಹೆಚ್ಚು" ಎಂದು ವಾದ ಮಾಡಿತು. ಸಭೆ ಮೂಕವಿಸ್ಮಿತವಾಯಿತು. ಗೇರುಬೀಜದ ಮಾತು ಅವುಗಳ ತಲೆಯಲ್ಲಿ ದಟ್ಟವಾಗಿ ತುಂಬಿಹೋಯಿತು.

ಯಾವುದೇ ರಂಗದಲ್ಲಿ, ಕ್ಷೇತ್ರದಲ್ಲಿ, ಸಂಘಟನೆಯಲ್ಲಿ 'ನನ್ನ ಬೀಜ ಹೊರಗೆ' ಎನ್ನುವ ಗೇರುಬೀಜಗಳೂ ಇರುತ್ತವೆ. ●

● ಹೆಬ್ಬಾಳೆ ಲಿಂಗರಾಜು

ಸಂಪಾದಕ/ಪ್ರಕಾಶಕ/ಮುದ್ರಕ: ರಂಗಸ್ವಾಮಿ ಬೆಲ್ಲದಮಡು, 2ಬಿ, ಮಹದೇಶ್ವರ ನಿಲಯ, 2ನೇ ಕ್ರಾಸ್, 2ನೇ ಮೈನ್, ಎ.ಕೆ. ಕಾಲನಿ, ಹೊಸಳ್ಳಿ, ಬೆಂಗಳೂರು-40
ಮುದ್ರಣ : ಪೃಥ್ವಿ ಪ್ರಕಾಶನ ಲಿಮಿಟೆಡ್, ವಿಜಯನಗರ, ಬೆಂಗಳೂರು-40